# ಪ್ರಕಟಣೆ

ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆ ಹದಿಹರೆಯದ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸುತ್ತಿದೆ. ಕರ್ನಾಟಕದ ಅತಿಹೆಚ್ಚು ವಿದ್ಯಾರ್ಥಿ ಸ್ವಯಂ ಸೇವಕರನ್ನು ಹೊಂದಿದ ಇಲಾಖೆಯಾಗಿದ್ದು ಅತಿಸಂತೋಷದ ವಿಷಯವಾಗಿದೆ. ಇಲಾಖೆಯಲ್ಲಿ 78,000 ವಿದ್ಯಾರ್ಥಿಗಳು, 780 ಕಾರ್ಯಕ್ರಮಾಧಿಕಾರಿಗಳನ್ನು, 04 ಜನ ಸಹಾಯಕ ಸಂಯೋಜನಾಧಿಕಾರಿಗಳು ಮತ್ತು ಒಬ್ಬ ರಾಜ್ಯ ಸಂಯೋಜನಾಧಿಕಾರಿಗಳು ಇರುವ ಇಲಾಖೆ ಸಾಕಷ್ಟು ಸಮಾಜಮುಖಿ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದೆ. 2007 ರಿಂದೀಚೆಗೆ ಇಲಾಖೆಯಲ್ಲಿ ಹದಿಹರೆಯದ ವಿದ್ಯಾರ್ಥಿಗಳಿಗಾಗಿಯೇ ಅನೇಕ ಉತ್ತಮ( ಜಿಲ್ಲಾ ಮಟ್ಟದ, ವಿಭಾಗೀಯ ಮಟ್ಟದ, ರಾಜ್ಯಮಟ್ಟದ ಮತ್ತು ರಾಷ್ಟ್ರೀಯ ಭಾವೈಕ್ಯತಾ) ಶಿಬಿರಗಳನ್ನು ಏರ್ಪಡಿಸಿ ಲಕ್ಷಾಂತರ ವಿದ್ಯಾರ್ಥಿಗಳ ಪ್ರೇರಣೆಗೆ ಪೂರಕವಾಗಿದೆ. ಮತ್ತು ಪ್ರತಿ ವರ್ಷ ಕಾರ್ಯಕ್ರಮಾಧಿಕಾರಿಗಳ ಪುನಃಶ್ಚೇತನ ಕಾರ್ಯಗಾರ ಮತ್ತು ಶೈಕ್ಷಣಿಕ ವರ್ಷದ ಕೊನೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆ ನ ಲೆಕ್ಕಪರಿಶೋಧನಾ ಕಾರ್ಯಗಾರವನ್ನು ಅತ್ಯಂತ ಯಶಸ್ವಿಯಾಗಿ ಏರ್ಪಡಿಸುತ್ತಾ ಬಂದಿರುವ ಇಲಾಖೆಗೆ ರಾಜ್ಯ ಸರಕಾರದಿಂದ ಈಗಾಗಲೇ ಎರಡು ಬಾರಿ ಉತ್ತಮ ನಿರ್ದೇಶನಾಲಯ ಎಂಬ ಪ್ರಶಸ್ತಿಯನ್ನು ನೀಡಿ ಮಾನ್ಯ ರಾಜ್ಯಪಾಲರು ಸನ್ಮಾನಿಸಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳ ಯಶಸ್ಸಿನಲ್ಲಿ ರಾಜ್ಯದ ಪ್ರತಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಪರಿಶ್ರಮವಿದೆ. ಈ ಕಾರ್ಯಕ್ರಮಗಳನ್ನು ರಾಜ್ಯದ ಪ್ರತಿ ಪದವಿ ಪೂರ್ವ ಕಾಲೇಜಿಗೆ ತಲುಪಿಸಬೇಕೆಂಬ ಮಹಾದಾಶೆಯನ್ನು ಮಾನ್ಯ ನಿರ್ದೇಶಕರು ರಾಜ್ಯ ಸಲಹಾ ಸಮಿತಿಯಲ್ಲಿ ಪ್ರಸ್ತಾಪಿಸಿದಾಗ ಎಲ್ಲಾ ಸದಸ್ಯರು ಒಪ್ಪಿ ತ್ರೈಮಾಸಿಕ ವಾರ್ತಾ ಸಂಚಿಕೆಯನ್ನು ಇಲಾಖೆಯಿಂದ ಹೊರತರಲು ನಿರ್ಣಯ ಕೈಗೊಳ್ಳಲಾಗಿದೆ. ಕಾರಣ ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು ಕೈಗೊಳ್ಳುವ ಉತ್ತಮ ಕಾರ್ಯಕ್ರಮಗಳ ಪೋಟೋ, ಪತ್ರಿಕಾ ಪ್ರಕಟಣೆ, ವರದಿಗಳು, ರಾಷ್ಟ್ರೀಯ ಸೇವಾ ಯೋಜನೆಗೆ ಸಂಬಂಧಿಸಿದ ಕವನ, ಲೇಖನಗಳನ್ನು ಮತ್ತು ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು ಭಾಗವಹಿಸಿದ ಯಾವುದೇ ವಿಶೇಷ ಕಾರ್ಯಕ್ರಮಗಳ ವರದಿಯ ಮೂಲಪ್ರತಿಯನ್ನು ರಾಷ್ಟ್ರೀಯ ಸೇವಾ ಯೋಜನೆ **ವಿಭಾಗ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್ ಮಲ್ಲೇಶ್ವರಂ ಬೆಂಗಳೂರು.** ಇವರಿಗೆ ಮತ್ತು ಈ ಕೆಳಗಿನ ಇ.ಮೇಲ್ ವಿಳಾಸಕ್ಕೆ ದಿನಾಂಕ 10.01.2016 ರೊಳಗೆ ಕಳುಹಿಸಲು ಕೋರಿದೆ.

Punssm3@gmail.com , shivarajhutti@yahoo.com

ಶ್ರೀಮತಿ ಪಿ.ಆರ್. ಗಾಯತ್ರಿರೆಡ್ಡಿ,
ರಾಜ್ಯ ಸಂಯೋಜನಾಧಿಕಾರಿಗಳು
ರಾಷ್ಟ್ರೀಯ ಸೇವಾ ಯೋಜನೆ ವಿಭಾಗ ಪದವಿಪೂರ್ವ ಶಿಕ್ಷಣ ಇಲಾಖೆ,
ಬೆಂಗಳೂರು.

ಪ್ರತಿ

1. ಸಹಾಯಕ ನಿರ್ದೇಶಕರು ಇ-ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು
2. ಕಛೇರಿ ಪ್ರತಿ.